# ಮಾನಸ ಗಂಗೋತ್ರಿ

ಸಂವಹನ ವಿದ್ಯಾರ್ಥಿಗಳ ಪ್ರಾಯೋಗಿಕ ಪತ್ರಿಕೆ

ಸಂಚಿಕೆ:7 | ಸಂಪುಟ:46 | ದಿನಾಂಕ:25/11/2016 | ಪುಟಗಳು:4



ಮರಗಳಂತೆ ಬೆಳೆಯುವುದು ಯಾವಾಗ



ತಪ್ಪು - ಸರಿ - ಶಿಕ್ಷೆ ಎಂಬ ಆವಾಂತರ



ಹೆಣ್ಣು ಅಮ್ಮ, ಅಕ್ಕ, ಮಡದಿಯಾಗಿ ಬೇಕು. ಮಗಳಾಗಿ.....?




# ಮಕ್ಕಳನ್ನು ಮಾನಸಿಕವಾಗಿ, ಭೌದ್ಧಿಕವಾಗಿ ಸದೃಢರನ್ನಾಗಿ ಬೆಳೆಸಬೇಕು

ಮಕ್ಕಳ ಮೇಲಿನ ದೌರ್ಜನ್ಯ ನಿಯಂತ್ರಿಸಲು ಮತ್ತು ಅರಿವು ಮೂಡಿಸುವ ಸಲುವಾಗಿ ಜಿಲ್ಲಾಡಳಿತದ ಸಹಯೋಗದಲ್ಲಿ ಯಂಗ್ ಇಂಡಿಯನ್ಸ್ (ವೈಐ ಮೈಸೂರು ಅಧ್ಯಾಯ) ವತಿಯಿಂದ ಶನಿವಾರ ಮಾನಸ ಗಂಗೋತ್ರಿಯ ಗಡಿಯಾರ ಗೋಪುರದ ಬಳಿ ಮಾನವ ಸರಪಳಿ ನಿರ್ಮಿಸಿ ಅರಿವು ಮೂಡಿಸಲಾಯಿತು.

ನಗರದ ವಿವಿಧ ಶಾಲೆಗಳ ಮಕ್ಕಳು ಮತ್ತು ಯುವಕರು ಸೇರಿದಂತೆ 500ಕ್ಕೂ ಹೆಚ್ಚು ಮಂದಿ ಜಾಥಾ ನಡೆಸಿ ಗಡಿಯಾರ ಗೋಪುರದ ಬಳಿ ಮಾನವ ಸರಪಳಿ ನಿರ್ಮಿಸಿ ಮಕ್ಕಳ ರಕ್ಷಣೆ ಕುರಿತಾದ ಘೋಷಣೆಗಳನ್ನು ಕೂಗಿ ಅರಿವು ಮೂಡಿಸುವ ಯತ್ನ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ಡಿ.ರಂದೀಪ್ ಅವರು, ಮಕ್ಕಳನ್ನು ಮಾನಸಿಕವಾಗಿ ಮತ್ತು ಭೌದ್ಧಿಕವಾಗಿ ಸದೃಢರನ್ನಾಗಿ ಬೆಳೆಸುವ ಜವಾಬ್ದಾರಿ ಪೋಷಕರ ಮೇಲಿದೆ. ಇಂತಹ ಜಾಗೃತಿ ಕಾರ್ಯಕ್ರಮ ಒಂದು ದಿನಕ್ಕೆ ಮಾತ್ರ ಸೀಮಿತವಾಗಿರದೆ, ನಿರಂತರವಾಗಿ ಮಕ್ಕಳ ರಕ್ಷಣೆಯ ಜವಾಬ್ದಾರಿ ಹೊರಬೇಕು ಎಂದರು.



ಮೈಸೂರಿನ ಮಾನಸಗಂಗೋತ್ರಿಯ ರೌಂಡ್ ಕ್ಯಾಂಟೀನ್ ಬಳಿ ಇರುವ ಗಡಿಯಾರ ಗೋಪುರದ ಬಳಿ ಶನಿವಾರ ಮಕ್ಕಳ ಸುರಕ್ಷತೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ನಿಯಂತ್ರಿಸಲು ಮತ್ತು ಜನರಲ್ಲಿ ಅರಿವು ಮೂಡಿಸುವ ಸಲುವಾಗಿ ಜಿಲ್ಲಾಡಳಿತ ಸಹಯೋಗದಲ್ಲಿ ಯಂಗ್ ಇಂಡಿಯನ್ಸ್ (ವೈಐ ಮೈಸೂರು ಅಧ್ಯಾಯ) ವತಿಯಿಂದ ಬೃಹತ್ ಮಾನವ ಸರಪಳಿ ನಿರ್ಮಿಸಿ ಅರಿವು ಮೂಡಿಸಲಾಯಿತು. ಜಿಲ್ಲಾಧಿಕಾರಿ ಡಿ.ರಂದೀಪ್, ಎಚ್.ವಿ.ರಾಜೀವ್, ಶ್ರದ್ಧಾ ಪಾಠಕ್, ರಮ್ಯ ಬೋಪಣ್ಣ, ರಾಜಾರಾಂ, ಭರತ್ ದೇವರಾಜಪ್ಪ, ಅಂಜಲಿ ಅರುಣ್ ಸೇರಿದಂತೆ ನೂರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು, ಸಾರ್ವಜನಿಕರು ಭಾಗವಹಿಸಿದ್ದರು.

ಮಕ್ಕಳ ಮೇಲೆ ಲೈಂಗಿಕ ಕಿರುಕುಳ ನೀಡುತ್ತಿರುವವರಲ್ಲಿ ವಿದ್ಯಾವಂತರೇ ಹೆಚ್ಚಿದ್ದಾರೆ. 2007ರ ಮಕ್ಕಳ ರಕ್ಷಣೆ ಜಾರಿಗೆ ಬಂದಿದ್ದರೂ ಅದು ಯಶಸ್ವಿಯಾಗುತ್ತಿಲ್ಲ. ಮಕ್ಕಳು ಈ ರೀತಿಯ ದುರ್ಘಟನೆ ನಡೆದಾಗ ನಂಬಿಕಸ್ಥರಲ್ಲಿ ಯಾವುದೇ ಸಂಕೋಚವಿಲ್ಲದೆ ತಿಳಿಸಬೇಕು. ದೂರು ನೀಡಲು ಹಿಂಜರಿಯಬಾರದು. ಇಂತಹ ಪ್ರಕರಣಗಳನ್ನು ಗೌಪ್ಯವಾಗಿ ಇಡಲಾಗುತ್ತದೆ. ಮಕ್ಕಳ ರಕ್ಷಣೆಗಾಗಿ ಮತ್ತು ಇದಕ್ಕೆ ಸಂಬಂಧಪಟ್ಟಂತೆ ದೂರು ನೀಡಲು 1098 ಸಂಖ್ಯೆಗೆ ಕರೆ ಮಾಡಿ ಎಂದು ಸಲಹೆ ನೀಡಿದರು.

ಯಂಗ್ ಇಂಡಿಯನ್ಸ್ ಅಧ್ಯಕ್ಷೆ ರಮ್ಯ ಬೋಪಣ್ಣ ಮಾತನಾಡಿ, ಮಕ್ಕಳ ಅಪಹರಣ ಮತ್ತು ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ದೇಶದ ಅಭಿವೃದ್ಧಿಗೆ ಹಿನ್ನಡೆಯಾಗಲಿದೆ. ಆದ್ದರಿಂದ ಜನರಲ್ಲಿ ಈ ಕುರಿತು ಅರಿವು ಮೂಡಿಸುವ ಅಗತ್ಯವಿದೆ ಎಂದರು.

ಬಿಜೆಪಿ ಮುಖಂಡ ಎಚ್ .ವಿ. ರಾಜೀವ್, ರೋಟರಿ ಮೈಸೂರು ಅಧ್ಯಕ್ಷ ರಾಜಾರಾಂ, ಅಕ್ಷರ ಕುಮಾರ್, ಪಾಠಕ್ ಡೆವಲಪರ್ಸ್ ಮತ್ತು ಯಂಗ್ ಇಂಡಿಯನ್ಸ್ ಬ್ರಾಂಡಿಂಗ್ ಮತ್ತು ಕಮ್ಯುನಿಕೇಷನ್ಸ್ ಅಧ್ಯಕ್ಷೆ ಶ್ರದ್ಧಾ ಪಾಠಕ್, ಭರತ್ ದೇವರಾಜಪ್ಪ, ಅಂಜಲಿ ಅರುಣ್ ಇತರರು ಹಾಜರಿದ್ದರು. ರೋಟರಿ ಶಾಲೆ, ಜೆಎಸ್ಎಸ್ ಪಬ್ಲಿಕ್ ಶಾಲೆ, ಜೆಎಸ್ಎಸ್ ಮಹಾವಿದ್ಯಾಪೀಠ, ರೋಟರಿ ಮಿಡ್‌ಟೌನ್, ಚೈತ್ರ ಶಾಲೆ, ವಿಜಯವಿಠಲ, ಪ್ರಮತಿ ಹಿಲ್‌ವ್ಯೂ ಅಕಾಡೆಮಿ, ಮಹಾಜನ, ಗಂಗೋತ್ರಿ ಶಾಲೆ ಸೇರಿದಂತೆ ಹಲವಾರು ಶಾಲೆಗಳ 500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು

**-ಸುನೀಲ್ ಕುಮಾರ್.ಎಂ ಎಂ**

### ಅಭಿಯಾನದ ಉದ್ದೇಶ

ಮಕ್ಕಳು ತಮ್ಮ ಮನಸ್ಸಿನಲ್ಲಿರುವ ಚಿಂತೆ, ಸಮಸ್ಯೆ ಗಳನ್ನು ವಿಶ್ವಾಸಾರ್ಹರೊಂದಿಗೆ ಹಂಚಿ ಕೊಳ್ಳುವುದು, ಮಗುವಿನ ಹಕ್ಕನ್ನು ಬೆಂಬಲಿಸಲು ಪೋಷಕರಿಗೆ ಜಾಗೃತಿ ಮೂಡಿಸುವುದು, ಅವರ ಮುಂದಿನ ಸುಂದರ ಬದುಕಿಗೆ ಭದ್ರತೆ ಒದಗಿಸುವುದು ಹಾಗೂ ಎದುರಾಗುವ ಸಮಸ್ಯೆ ಗಳನ್ನು ಜಯಿಸುವ ಮಾರ್ಗಗಳನ್ನು ಸೂಚಿಸುವುದು. ಮಕ್ಕಳ ಲೈಂಗಿಕ ಕಿರುಕುಳ ಬಗ್ಗೆ ಕಲ್ಪಿತವಾದ ಮಾತು ಗಳನ್ನು ತೆಗೆದುಹಾಕುವುದು.

# ಕನ್ನಡ, ಸಾಹಿತ್ಯಿಕವಾಗಿ ಸಮೃದ್ಧವಾದ ಭಾಷಾ ಸಂಪತ್ತನ್ನು ಹೊಂದಿದೆ



ಕನ್ನಡ ಭಾಷೆಯು ಕ್ರಿಸ್ತ ಪೂರ್ವದಿಂದ ಬಂದಿರುವ ಹಳೆಯ ಹಾಗೂ ಸಾಹಿತ್ಯಿಕವಾಗಿ ಸಮೃದ್ಧವಾದ ಭಾಷಾ ಸಂಪತ್ತನ್ನು ಹೊಂದಿರುವ ಭಾಷೆಗಳಲ್ಲಿ ಅಗ್ರಸ್ಥಾನ ಪಡೆದಿದೆ ಎಂದು ಜಾನಪದ ವಿದ್ವಾಂಸ ಪ್ರೊ. ಪಿ. ಕೆ. ರಾಜಶೇಖರ್ ತಿಳಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಬಿ.ಎಂ.ಶ್ರೀ ಸಭಾಂಗಣದಲ್ಲಿ ಏರ್ಪಡಿಸಿದ್ದ ಕನ್ನಡ ರಾಜ್ಯೋತ್ಸವ ಆಚರಣೆ ಹಾಗೂ ಪ್ರೊ. ಹಾ.ಮಾ.ನಾ. ದತ್ತಿ ಬಹುಮಾನ ವಿತರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಂಸ್ಕೃತ ದೈವಭಾಷೆ, ಆದಿಭಾಷೆ ಎಂದು ಹಲವಾರು ವರ್ಷಗಳಿಂದ ನಂಬಿಸಲಾಗಿದೆ. ಆದರೆ ಆರ್ಯರು ದಕ್ಷಿಣಾ ಏಷ್ಯಾದಿಂದ ಭಾರತಕ್ಕೆ ವಲಸೆ ಬಂದ ಮೇಲೆ ಸಂಸ್ಕೃತ ಭಾಷೆ ಉಗಮವಾಗಿದೆ.

ಆದರೆ ಆರ್ಯರಿಗಿಂತ ಮೊದಲೇ ದ್ರಾವಿಡರು ಭಾರತದ ಮೂಲನಿವಾಸಿಗಳಾಗಿದ್ದರು. ಇದರಿಂದ ದ್ರಾವಿಡ ಭಾಷೆಯಾದ ಕನ್ನಡ ಪ್ರಾಚೀನ ಭಾಷೆ ಎಂಬ ಜಾಗೃತಿ ಮೂಡಬೇಕಾಗಿದೆ. ತಾಯಂದಿರು ಮಗುವಿಗೆ ಮಾತನಾಡುವುದನ್ನು ಕಲಿಸುವಾಗ ಮಾತೃ ಭಾಷೆಯಿಂದಲೇ ಆರಂಭಿಸಬೇಕು ಎಂದರು. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಇತ್ತೀಚಿನ ದಿನಗಳಲ್ಲಿ ಕನ್ನಡ ಭಾಷೆ ನಶಿಸುತ್ತಿರುವ ಭಾಷೆಗಳಲ್ಲಿ 20ನೆಯ ಸ್ಥಾನದಲ್ಲಿದೆ ಎಂಬುದನ್ನು ಕೇಳಿದರೆ ಆತಂಕವಾಗುತ್ತಿದೆ. ಮುಂದಿನ ದಿನಗಳಲ್ಲಿ ಕನ್ನಡಿಗರ ಮನದಲ್ಲಿ, ಮನೆಯಲ್ಲಿ ಕನ್ನಡ ಉಳಿಸಬೇಕು ನಿರ್ದೇಶಕಿ ಪ್ರೊ.ಪ್ರೀತಿ ಶ್ರೀಮಂಧರ್‌ಕುಮಾರ್, ಪ್ರೊ. ವಿಜಯಕುಮಾರಿ ಕರಿಕಲ್, ಡಾ.ಅಕ್ಕಮಹಾದೇವಿ, ಡಾ.ಎನ್.ಕುಮುದ, ಡಾ. ಲಲಿತಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

> ಜಾನಪದ ಕಲಾವಿದರು ಹಲವಾರು ಭಾಷೆ ಗಳನ್ನು ಕಲಿತು, ಅದೇ ಭಾಷೆಯಲ್ಲಿ ಪದಗಳನ್ನು ಕಟ್ಟಿ, ಹಾಡಿ ತಮ್ಮ ಭಾಷೆಯನ್ನು ಉಳಿಸುವುದರ ಜೊತೆಗೆ ಬೇರೆ ಭಾಷೆಯನ್ನು ಗೌರವ ಭಾವನೆ ಯಿಂದ ನೋಡುತ್ತಿದ್ದರು. ಭಾಷೆಯ ಉಳಿವಿನಲ್ಲಿ ನಗರ ಪ್ರದೇಶಗಳ ಜನರಿಗಿಂತ ಗ್ರಾಮೀಣ ಪ್ರದೇಶದ ಜನರ ಪಾತ್ರ ಮಹತ್ವದ್ದು.
>
> **-ಪ್ರೊ.ಪಿ.ಕೆ.ರಾಜಶೇಖರ್**

**-ತ್ರಿವೇಣಿ**

# ನೋಟು ನಿಷೇಧದ ಹೆಸರಿನಲ್ಲಿ ಆಯಿತು ಅನಾಹುತ

ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ನೋಟು ನಿಷೇಧದ ಮುಖವಾಡವನ್ನು ಹೊತ್ತು ದೇಶವಿರೋದ ಕೆಲಸವನ್ನು ಮಾಡುತ್ತಿದೆ ಎಂದು ಮಾಜಿ ವಿಧಾನ ಪರಿಷತ್ ಸದಸ್ಯ ಎಂ.ಕೆ.ಸುಬ್ಬಯ್ಯ ಅರೋಪಿಸಿದರು.

ಬಹುಜನ ವಿದ್ಯಾರ್ಥಿಸಂಘದ ವತಿಯಿಂದ ಮಾನಸ ಗಂಗೋತ್ರಿಯ ಮಾನವಿಕ ಸಭಾಂಗಣದಲ್ಲಿ ಭಾನುವಾರ ಏರ್ಪಡಿಸಿದ್ದ 'ನೋಟು ರದ್ದು ಕ್ರಮ ಬಹುಜನ ಭಾರತದ ಮೇಲಾಗುವು ಪರಿಣಾಮ ಕುರಿತು ವಿಚಾರಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

500, 1000 ರೂ ಮುಖ ಬೆಲೆಯ ನೋಟುಗಳನ್ನು ನಿಷೇದಿಸಿರುವುದ-ರಿಂದ ಮೋದಿ ಸರ್ಕಾರಕ್ಕೆ ಅನುಕೂಲವೇ ಆಗಿದೆ. ನೋಟು ನಿಷೇಧದ ವಿಚಾರವು ಮೋದಿ ಬೆಂಬಲಿಗರಿಗೆ ಮುಂಚೆಯೇ ತಿಳಿದಿತ್ತು. ಹಾಗಾಗೀ ಮುಂಚಿತವಾಗಿಯೇ ಎಲ್ಲ ರೀತಿಯ ಭದ್ರತೆಯನ್ನು ಅವರು ಮಾಡಿಕೊಂಡಿದ್ದರು. ಇದು ಮೋದಿ ಸರ್ಕಾರವು ದೇಶಕ್ಕೆ ಮಾಡಿರುವ ಅನ್ಯಾಯ. ಭ್ರಷ್ಟಾಚಾರಕ್ಕೆ ಹೊಸ ಅಯಾಮವನ್ನು ಮೋದಿ ಸೃಷ್ಟಿಸಿದ್ದಾರೆ ಎಂದು ಕುಟುಕಿದರು.



ಚಿತ್ರದಲ್ಲಿ ರಾಂನಗರ ಸರ್ಕಾರಿ ಪ್ರಥಮ ದರ್ಜೇ ಕಾಲೇಜಿನ ಸಹಾಯಕ ಪ್ರಧ್ಯಾಪಕ ಡಿ.ಬೀರಯ್ಯ, ಅಹಾರ ತಜ್ಞ ಡಿ.ಕೆ.ಸಿ.ರಘು, ಪತ್ರಕರ್ತರ ಸಂಗದ ಅಧ್ಯಕ್ಷ ಕೆ.ದೀಪಕ್, ಬಹುಜನ ವಿದ್ಯಾರ್ಥಿ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಸೊಸಲೆ ಸಿದ್ಧರಾಜು.

ಚಲಾವಣೆ ಮಾಡದೇ ಇರುವ ಹಣವನ್ನು ಹೊರತೆಗೆಯಬೇಕು ಬೇನಾಮಿ ಆಸ್ತಿ ಮಾಡಿದವರನ್ನು ಮತ್ತು ಚಿನ್ನ ಖರೀದಿಗಾರರಲ್ಲಿ ಇರುವ ಹಣವನ್ನು ಹೊರತೆಗೆಯಬೇಕು ಆಗ ದೇಶ ಅಭಿವೃದ್ಧಿಯಾಗುತ್ತದೆ.

ಈಗ ನೋಡಿದರೆ ಹಣ ಬದಲಾವಣೆಯ ಕಾರಣದಿಂದ ಹೊಸ ಕೋಟ ನೋಟು ಬರುತ್ತಿವೆ. 2000 ನೋಟನ್ನು ನೋಡಿದರೆ ಕಳ್ಳ ನೋಟನ್ನು ನೋಡಿದ ಹಾಗೇ ಭಾಸವಾಗುತ್ತದೆ. ಇದರಿಂದ ದೇಶದ ಆರ್ಥಿಕತೆ ಏನಾಗಬಹುದು ಎಂದು ಆತಂಕವ್ಯಕ್ತಪಡಿಸಿದರು. ನೋಟು ಬದಲಾವಣೆಗಾಗಿ ಬ್ಯಾಂಕ್ ಎದುರು ಸಾಲು ನಿಂತು ಸತ್ತವರ ಸಂಖ್ಯೆ 250ಕ್ಕೂ ಮೀರಿದೆ. ಸತ್ತವರಲ್ಲಿ ಒಬ್ಬರಾದರೂ ಶ್ರೀಮಂತರಿದ್ದಾರೆಯೇ? ಅಥವಾ ಕಪ್ಪು ಹಣ ಹೊಂದಿದವರು ಇದ್ದಾರೆಯೇ? ಹಾಗಾಗಿ ನೋಟು ನೀಷೇಧ ಪ್ರಕ್ರಿಯೆಯು ಜನ ಸಾಮಾನ್ಯರಿಗೆ ಮಾತ್ರ ತೊಂದರೆ ನೀಡುತ್ತಿದೆ. ಎನ್ನುವುದರಲ್ಲಿ ಯಾವ ಅನುಮಾನ ಬೇಡ ಎಂದರು.

ಬಿಜೆಪಿ ಮುಖಂಡ ಜನಾರ್ಧನ್ ರೆಡ್ಡಿ ಅವರು ಕೋಟ್ಯಾಂತರ ರೂಪಾಯಿ ಖರ್ಚುಮಾಡಿ ಮಗಳ ಮಧುವೆ ಮಾಡಿದರು. ಇಷ್ಟು ಹಣ ಎಲ್ಲಿಂದ ಬಂತು. ಯಾವ ಬ್ಯಾಂಕಿನಲ್ಲೂ ಈಗಿನ ಪರಿಸ್ಥಿತಿಯಲ್ಲಿ ಅಷ್ಟು ದೊಡ್ಡ ಮೊತ್ತದ ಹಣವನ್ನು ಪಡೆಯಲು ಸಾಧ್ಯವಿರಲಿಲ್ಲ. ಇದನ್ನು ಪ್ರಶ್ನಿಸುವ ನೈತಿಜತೆ ಬಿಜೆಪಿಗೆ ಇಲ್ಲವೇ? ಅಥವಾ ಬಂಡವಾಳ ಶಾಹಿಗಳು ರಾಜಕಾರಣಿಗಳದ್ದೆಲ್ಲಾ ಒಂದೇ ಬಣ್ಣವೆಂದರು.

**-ಯಶಸ್ವಿನಿ ಎಚ್ ಬಿ**




## ಹಿತನುಡಿ

**ಅತಿಯಾದ ಆಸೆ ಇದ್ದ ಮೇಲೆ ಬೇರೆ ದುರ್ಗುಣಗಳೇಕೆ?**

**-ಭರ್ತೃಹರಿ**

## ಸಂಪಾದಕೀಯ ಮಂಡಳಿ

ಸಂಪಾದಕರು : ಡಾ॥ ಮಹೇಶ್ಚಂದ್ರ ಗುರು
ವಿದ್ಯಾರ್ಥಿ ಸಂಪಾದಕರು: ವಿಜಯಲಕ್ಷ್ಮಿ ಮೆಟಗಾರ
ತ್ರಿವೇಣಿ
ಯಶಸ್ವಿನಿ
ಶ್ರೀನಿವಾಸ್ ನಾಯಕ್ ಕೆ
ಸುನೀಲ್ ಕುಮಾರ್. ಎಂ ಎಂ
ಶಿವಶಂಕರ
ಪುಟ ವಿನ್ಯಾಸ : ಅಕ್ಷಯ್ ಕೆ

## ಸಂಪಾದಕೀಯ

# ಹೆಸರಿಗೆ ಮಾತ್ರ ಪರಿಹಾರ

ಗಂಡುಮೆಟ್ಟಿದ ನಾಡು ಎಂದೇ ಖ್ಯಾತಿಯಿರುವ ಉತ್ತರ ಕನಾಟಕವು ವರ್ಷವಿಡೀ ಮಳೆಯ ನೆರಳು ಕಾಣದೆ ಪರದಾಡುವುದು ಹೊಸ ವಿಷಯವೇನಲ್ಲ, ಆದರೂ ಕೂಡ ಇಲ್ಲಿನ ರೈತಾಪಿ ವರ್ಗವು ಯಾವುದಕ್ಕೂ ಜಗ್ಗದೆ ಎಲ್ಲಾ ಕೆಲಸಕ್ಕೂ ಸೈ ಎನ್ನುವಂತಹದ್ದು. ಹೌದು ಉತ್ತರ ಕರ್ನಾಟಕ ಎಂದರೆ ಸಾಕು ಅದು ಬರದ ನಾಡು ಎಂದು ಗುರ್ತಿಸುವುದುಂಟು ಈ ಭಾಗದ ವಿಜಯಪುರ, ಬಾಗಲಕೋಟೆ, ಬಳ್ಳಾರಿ, ರಾಯಚೂರ, ಗುಲ್ಬರ್ಗ, ಧಾರವಾಡ, ಗದಗ ಇವುಗಳಂತೂ ಮಳೆಯನ್ನು ಮರೆತಂತಿದೆ. ಇನ್ನೊಂದೆಡೆ ಅಪರೂಪಕ್ಕೆ ಬರುವ ಮಳೆರಾಯ ಅವಾಂತರಗಳನ್ನು ಸೃಷ್ಟಿಸಿ ಅಲ್ಪ ಸ್ವಲ್ಪ ಬರುತ್ತಿದ್ದ ಬೆಳೆಯನ್ನು ನಾಶ ಮಾಡಿದ್ದು ಲಕ್ಷಾಂತರ ರೂಪಾಯಿ ನಷ್ಟ ಆಯ್ತು, ಇನ್ನು ಸರ್ಕಾರದಿಂದ ಹೆಸರಿಗೆ ಮಾತ್ರ ಪರಿಹಾರ ಘೋಷಣೆ ಆಗಿತ್ತು ಎಂಬುದು ನೆನಪಷ್ಟೆ.

ಅದೇನೊ ಗೊತ್ತಿಲ್ಲ ಬರಗಾಲದ ಬರೆ, ಬಿಸಿಲಿನ ತಾಪ, ಜೊತೆಗೆ ಬೆಲೆಯೆ-ರಿಕೆಯ ಭಾರ ಇವೆಲ್ಲವು ನಮ್ಮ ಕೃಷಿಕರಿಗೆ ಪೆಟ್ಟು ನೀಡುತ್ತಲೇ ಇವೆ. ಇನ್ನು ಕೆಲವು ಭಾಗಗಳಲ್ಲಿ ಕುಡಿಯುವ ನೀರಿನ ಸಮಸ್ಯ ತಾಂಡವವಾಡುತ್ತಿದೆ. ಮಹದಾಯಿ ನೀರಿನ ಕನಸು ಮರಿಚಿಕೆಯಾಗುವುದೇನೋ ಎಂಬ ಆತಂಕವು ಬೆಂಬಿಡದೆ ಕಾಡಿತ್ತಿದ್ದ ಬೆನ್ನಲ್ಲೇ ಇತ್ತೀಚಿಗೆ ಬಂದ ನ್ಯಾಯಾಂಗೀಯ ತೀರ್ಪು ಕೇವಲ ಉತ್ತರ ಕರ್ನಾಟಕಕ್ಕೆ ಮಾತ್ರವಲ್ಲದೇ ಇಡೀ ಅಖಂಡ ಕರ್ನಾಟಕವದ ರೈತ ಕುಟುಂಬಗಳ ಆಸೆಯನ್ನ ಛಿದ್ರಗೊಳಿಸಿದೆ.ಬದುಕಿನ ಬೆನ್ನೆಲುಬಾದ ಭೂಮಿ ಬರಿದಾದಾಗ ದಾಹದಿಂದ ಎದೆ ಬಿರಿದ ಧರಣಿಯ ನೊಡಲಾಗದೆ ರೈತರು ಆತ್ಮಹತ್ಯೆಯಂತಹ ಆಲೋಚನೆಗಳನ್ನು ಮಾಡುತ್ತಿದ್ದು, ಸತ್ತವರಿಗೆ ಪರಿಹಾರ ಘೋಷಣೆ ಆಗುತ್ತದೆಯೇ ಹೊರತು ಸಮಸ್ಯಗೆ ಬೇಕಾದ ಪರಿಹಾರ ಕಾರ್ಯಗತವಾಗದಿರುವುದು ಅಸಹಾಯತೆಯ ದುರುಪಯೋಗವೇ ಹೌದು.

ಬೇಡದ ಕಡೆಗಳಲ್ಲಿ ಬರುವ ಮಳೆ, ಬೇಡುವ ಭಾಗದ ಜನರನ್ನು ಕಾಡುತ್ತಿರುವ ಜೊತೆಗೆ ನೀರಿಗಾಗಿ ಕಾನೂನು ಹೋರಾಟ ಮಾಡುವ ಪರಿಸ್ಥಿತಿ ಎದುರಾಗಿದೆ. ಇನ್ನು ಕೇವಲ ಪ್ರಚಾರಕ್ಕೆಂದು ಬೆಂಬಲ ಸೂಚಿಸುವ ಕೆಲ ಪಟ್ಟಬದ್ಧ ಹಿತಾಸಕ್ತಿಗಳು ನಂತರದ ದಿನಗಳಲ್ಲಿ ತಿರುಗಿಯೂ ನೋಡದಿರುವುದು ವಿಪರ್ಯಾಸವೆ ಸರಿ. ಇದನ್ನೆಲ್ಲ ಕಂಡ ರೈತ ತನ್ನ ಜಿವನಾಂಶಕ್ಕಾಗಿ ಗೂಳೆ ಹೊರಟ್ಟಿದ್ದು ಈ ಭಾಗದ ಜನರ ಗೋಳು ಹೇಳ ತೀರದು.

ಇನ್ನು ಈ ಮಧ್ಯ ಉತ್ತರ ಕರ್ನಾಟಕದ ಅಭಿವೃದ್ಧಿ ಮಾಡುವುದಾಗಿ ಮಾಜಿ ಮುಖ್ಯಮಂತಿ ಹೆಚ್.ಡಿ ಕುಮಾರಸ್ವಾಮಿ ಯವರು ಹುಬ್ಬಳ್ಳಿಯಲ್ಲಿ ಮನೆಮಾಡಿ ಎಲ್ಲರ ಹುಬ್ಬೇರುವಂತೆ ಮಾಡಿದ್ದಾರೆ. ಮಹದಾಯಿ ಗಲಾಟೆಯಲ್ಲಿ ಜನರ ಮನೆ ಮನೆಗೆ ನುಗ್ಗಿ ಪೋಲಿಸರು ಹಿಂಸಾಚಾರವೆಸಗಿದಾಗ ನೆನಪಾಗದ ಉತ್ತರ ಕರ್ನಾಟಕ, ಪಕ್ಷದ ಬಲವರ್ಧನೆ ಮಾಡುವಾಗ ನೆನಪಾಗಿದ್ದು ಅದಾವ ಮುಖವಿಟ್ಟುಕೊಂಡು ಜನರೆದುರಿಗೆ ಬಂದಿದ್ದಾರೋ ಗೌಡ್ರು. ಜೊತೆಗೆ ಭರವಸೆಗಳ ಮಾಹಾಪೂರವನ್ನೆ ಹರಿಸುತ್ತಿದ್ದು, ತಾವು ಮುಖ್ಯಮಂತ್ರಿಯಾದ್ರೆ 24 ಗಂಟೆಗಳಲ್ಲಿ ರೈತರ ಸಾಲ ಮನ್ನಾ ಮಾಡುವುದಾಗಿ ಘೊಷಿಸಿದ್ದಾರೆ. ಇದು ಇವರೊಬ್ಬರ ಸಮಸ್ಯೆಯಲ್ಲ ಎಲ್ಲಾ ಪಕ್ಷಗಳ ಹುಸಿ ಭರವೆಸೆಯಲ್ಲಿ ಇದು ಒಂದು. ಉತ್ತರದೆಡೆಗೆ ಗೌಡ್ರು ಪ್ರವೇಶವಾಗಿದೆ.ಇನ್ನು ಈ ಪಕ್ಷಕ್ಕೆ ಟಾಂಗ ಕೊಡಲು ಅದಾವ ನಾಯಕರ ಚಿತ್ತ ಉತ್ತರದತ್ತ ಬಿದ್ದರೂ ಈ ಬಾರಿ ನಮ್ಮ ಜನ ಇದಕ್ಕೆಲ್ಲ ತಕ್ಕ ಉತ್ತರ ನೀಡುವಲ್ಲಿ ಸಫಲರಾಗಲಿ ಎಂಬುದಷ್ಟೆ ನಮ್ಮ ಆಶಯ.

# ಮರಗಳಂತೆ ಬೆಳೆಯುವುದು ಯಾವಾಗ

ಅಸಮಾನತೆ,ಜಾತಿಯುತೆ ಬಡತನ ಸಿರಿತನ ಎಲ್ಲವನ್ನು ಮೀರಿದಂತಹೆ ಮೇಲು,ಕೀಳು ಎಂಬ ಭಾವನೆ. ಬಡವ ಶ್ರೀಮಂತನೆಂಬ ಯಾವುದೇ ದೋರಣೆಗಳಿಲ್ಲದ, ನಿಷ್ಕಲ್ಮಷ ವಾದ ಸ್ನೇಹ ಪ್ರೀತಿಗಳ ಆಗರ ಸ್ಥಳ ನಮ್ಮಶಾಲೆ ಅಲ್ಲಿ ಯಾವುದೇ ಲಿಂಗ ತಾರತಮ್ಯವಿಲ್ಲ ಗುರುಗಳೆ ದೇವರಾಗಿದ್ದು ಶಾಲೆಯೇ ದೇಗುಲವಾಗಿತ್ತು.

ನಮ್ಮೂರಿನ ಯಾವುದೇ ವ್ಯಕ್ತಿಗೂ ಅಂಜದ ನಾವು ಎಲ್ಲರಿಗೂ ಹಿಂದಿರುಗಿ ಮಾತನಾಡುತ್ತಿದ್ದವು. ಹೇಳಿದ್ದು ಕೇಳದಿದ್ರೆ ನಮ್ಮೂರಿನ ಜನರು ನಮ್ಮನ್ನು ಹೆದರಿಸಲು ಬಳಸುತ್ತಿದ್ದ ಒಂದೇ ಒಂದು ಅಸ್ತ್ರ ಅಂದರೆ ನಿಮ್ಮ ಮೇಸ್ತ್ರಿಗೆ ಹೇಳ್ತಿವಿ ಅಂತ ಹೆದರಿಸುವವರು.

ನಾವು ಅಂಜುವುದು, ಹೆದರುವುದು ನಮ್ಮ ಮೇಸ್ತ್ರಿಗೆ ಮಾತ್ರ ಅಂತ ಎಲ್ಲ-ರಿಗೂ ಗೊತ್ತಾಗಿತ್ತು. ಒಂದನೇ ತರಗತಿಯಿಂದ ಉತ್ತಮ ವಿದ್ಯಾರ್ಥಿಯಾಗಿ ಗುರುತಿಸಿ ಕೊಂಡಿದ್ದ ನಾನು. ಶಿಕ್ಷಕರ ಪ್ರೀತಿಯ ವಿದ್ಯಾರ್ಥಿಯಾಗಿದ್ದೆ, ನಮ್ಮ ಶಾಲೆಯಲ್ಲಿ ಪ್ರತಿವರ್ಷ ಐದನೇ ತರಗತಿಯ ವಿದ್ಯಾರ್ಥಿಗಳನ್ನು ಮಂತ್ರಿ ಮಂಡಲ ಅಂತ ಮಾಡಿ ವಿದ್ಯಾರ್ಥಿಗಳಿಗೆ ಅಧಿಕಾರ ನೀಡುತ್ತಿದ್ದರು. ಅದರಲ್ಲಿ ಅರೋಗ್ಯಮಂತ್ರಿ, ಸ್ವಚ್ಛತ ಮಂತ್ರಿ, ಅಹಾರ ಮಂತ್ರಿ



ಹೀಗೆ ಅನೇಕ ಕಾರ್ಯಗಳಿಗೆ ವಿದ್ಯಾರ್ಥಿಗಳನ್ನು ನೇಮಿಸುತ್ತಿದ್ದರು.

ಈ ಸಂದರ್ಭದಲ್ಲಿ ನನ್ನನ್ನು ವಾರ್ತಾ ಮಂತ್ರಿಯನ್ನಾಗಿ ನೇಮಿಸಲಾಯಿತು. ನಾನು ಅದರಂತೆ ಪತ್ರಿಕೆಗಳನ್ನು ಜೋಪಾನವಾಗಿ ಎತ್ತಿಡುವುದು, ವಿದ್ಯಾರ್ಥಿಗಳಿಗೆ ಪತ್ರಿಕೆಗಳನ್ನು ಓದಲು ನೀಡುವುದು ನನ್ನ ಕರ್ತವ್ಯವಾಗಿತ್ತು. ಹೀಗೆ ಶಾಲೆಯ ಪರಿಸರವನ್ನು ವಿದ್ಯಾರ್ಥಿಗಳಲ್ಲಿ ಶಿಸ್ತು ಮೂಡಿಸಲು ಈ ರೀತಿ ಮಾಡುತ್ತಿದ್ದರು.

ಈ ಸಂದರ್ಭದಲ್ಲಿ ನಮ್ಮ ಶಾಲೆಯ ಅಭಿವೃದ್ಧಿಗೆ ಸರ್ಕಾರದಿಂದ ಹಣ ಬಿಡುಗಡೆಯಾಗಿತ್ತು ಶಾಲೆಗೆ ಕಾಪೌಂಡ್,ಶಾರದ ದೇವಿ ವಿಗ್ರಹ ಸ್ಥಾಪನೆ, ಉತ್ತಮ ಪರಿಸರ ನಿರ್ಮಾಣ ಹೀಗೆ ಅನೇಕ ಕಾರ್ಯಗಳಲ್ಲಿ ನಾನು ನನ್ನ ಸ್ನೇಹಿತರು ಹೆಚ್ಚು ಭಾಗಿಯಾಗಿದ್ದವು. ಕಲ್ಲುಗಳನ್ನು ಆಯ್ದು ತಂದವು, ಗಾರೆ ಕೆಲಸಕ್ಕೆ ನೀರಿನ ಸೌಲಭ್ಯ ಮಾಡಿದವು, ಗಿಡಗಳನ್ನು ನೆಟ್ಟು, ಕೆರೆಯಿಂದ ನೀರು ತಂದು ಹಾಕಿದವು, ಹೀಗೆ ಅನೇಕ ಕಾರ್ಯಗಳಲ್ಲಿ ಭಾಗಿಯಾದ ನಾವು. ನಮ್ಮ ಮೇಸ್ಟ್ರು ನಮ್ಮನ್ನ ಯಾಕೆ ಹೀಗೆ ಗೋಳು ಹೊಯ್ದು ಕೊಳ್ತಾರೆ ಅಂತ ಶಾಪ ಹಾಕಿದ್ದರು.

ಇಂದು ನಾವು ನೆಟ್ಟ ಗಿಡಗಳು ಮರಗಳಾಗಿ ಬೆಳೆದು ಫಲ ನೀಡುತ್ತಿವೆ ಅ ಂದು ನೀರು ಹಾಕಿ ಬೆಳೆಸಿದ ವಿದ್ಯಾರ್ಥಿಗಳು, ಗಿಡ ನೆಟ್ಟ ಬೆಳೆಸಿದ ಶಿಕ್ಷಕರು ಯಾರು ಇಲ್ಲದಿದ್ದರು ಅವುಗಳನ್ನು ಕಂಡಾಗ ಹೃದಯ ತುಂಬಿ ಬರುತ್ತದೆ. ಆ ಮರಗಳ ಫಲವನ್ನು ನಾವು ಸವಿಯದಿದ್ದರು ನಮ್ಮ ಗುರುಗಳು ಮಾಡಿಸಿದ ಉತ್ತಮ ಕಾರ್ಯದಿಂದ ಇಂದು ನನ್ನ ತಮ್ಮ,ತಂಗಿಯ-ರಿಗೆ ನೆರಳಾಗಿ ಗುರುಗಳಿಗೆ ಫಲವಾಗಿ ಇರುವುದು ಸಂತೊಷವನ್ನುಂಟು ಮಾಡುತ್ತದೆ.

ನಾವು ನೆಟ್ಟ ಮರಗಳು ಬೆಳೆದು ನೆರಳು,ಫಲವನ್ನು ನೀಡುತ್ತಿವೆ ನಾವು ನಮ್ಮ ಶಾಲೆಗೆ ಊರಿಗೆ, ಗುರುಗಳಿಗೆ ಯಾವುದೇ ಹೆಸರು ನೀಡಿಲ್ಲ ಎಂಬ ನೋವು,ಬೇಸರ ಕಾಡಿದರು ನಂಬಿಕೆ ಇದೆ ಮರಗಳಂತೆ ಬೆಳೆದು ನೆರಳಾಗಿ,ಫಲವನ್ನು ನೀಡುವ ಮರಗಳು ಆಗುವ ಕನಸು ಇದೆ. ಎಲ್ಲರೂ ಫಲವನ್ನು ನೀಡುವ ಮರಗಳಾಗಿ ನೆರಳು ನೀಡಬೇಕು ಎಂಬುದು ನನ್ನ ಆಸೆ.

**-ಶ್ರೀನಿವಾಸ್**

# ವಿಶ್ವ ಸಮುದಾಯವನ್ನು ಒಂದಾಗಿಸುವ ಪ್ರಯತ್ನ

ಜೂನ್ 5 ರಂದು ವಿಶ್ವಪರಿಸರ ದಿನವನ್ನು ಆಚರಿಸುತ್ತೇವೆ. ನಿಮ್ಮ ಗ್ರಹಕ್ಕೆ ನಿಮ್ಮ ಅವಶ್ಯಕತೆಯಿದೆ ಬದಲಾಗುತ್ತಿರುವ ಭೂ ಹವಾಮಾನವನ್ನು ಎದುರಿಸಲು ಒಂದಾಗಿ ಎಂಬ ಧ್ಯೇಯವಾಕ್ಯ ಬದಲಾಗುತ್ತಿರುವ ಭೂಮಿಯ ಹವಾಮಾನದೆದುರಿಗೆ ವಿಶ್ವ ಜನ ಸಮುದಾಯವನ್ನು ಒಂದಾಗಿಸುವ ಪ್ರಯತ್ನ ಇದಾಗಿದೆ. ಉಷ್ಣತೆಯು ಹಲವಾರು ಕಾರಣಗಳ ಒಟ್ಟಾರೆ ಪ್ರಭಾವ. ಸೂರ್ಯರಶ್ಮಿ ಭೂಮಿಯನ್ನು ತಲುಪಲು ಕೋನ ಅಕ್ಷಾಂಶ ರೇಖಾಂಶ ,ಸಮುದ್ರ ಮಟ್ಟಕ್ಕಿಂತ ನಿರ್ದಿಷ್ಟ ಪ್ರದೇಶ ಎಷ್ಟು ಎತ್ತರದಲ್ಲಿದೆ ಸಮುದ್ರದ ಮೇಲಿಂದ ಬೀಸುವ ಮಾರುತಗಳು ಅದು ಅರಣ್ಯವೋ ಮರುಳುಗಾಡೋ ಕಿಕ್ಕಿರಿದ ಜನ ಸಂದಣಿಯ ಕಾಂಕ್ರೀಟ್ ಕಟ್ಟಡಗಳಿಂದ ಕೂಡಿದ ಪ್ರದೇಶವೋ ಕೃಷಿ ಭೂಮಿಗೆ ಸಮೀಪವಾಗಿರುವಂತಹ ವಸಾಹತೋ ಇತ್ಯಾದಿ. ಧ್ರುವ ಪ್ರದೇಶಗಳಲ್ಲಿ ಸೂರ್ಯರಶ್ಮಿ ಬೀಳುವ ಕೋನ ಅತ್ಯಂತ ದೊಡ್ಡದಾದ್ದರಿಂದ ಅಲ್ಲಿ ಉಷ್ಣತೆ ಬಹಳಷ್ಟು ಕಡಿಮೆ. ನಿರಂತರವಾಗಿ ನೀರು ಹೆಪ್ಪುಗಟ್ಟಿರುತ್ತದೆ. ಇವು ನಮ್ಮ ಭೂಮಿಯ ಧ್ರುವಗಳಾದ ಉತ್ತರದ ಅರ್ಕಟಿಕ್ ಮತ್ತು ದಕ್ಷಿಣದ ಅಂಟಾರ್ಟಿಕ್ ಇತ್ಯಾದಿ ಪ್ರದೇಶಗಳು. ಏರುತ್ತಿರುವ ಭೂಮಿಯ ತಾಪಮಾನ ಒಂದೆಡೆ ಹಿಮರಾಶಿಯನ್ನು ಕರಗಿಸಿ ನದಿಗಳಲ್ಲಿ ಸಾಗರಗಳಲ್ಲಿ ನೀರಿನ ಮಟ್ಟವನ್ನು ಏರಿಸಿ ಪ್ರವಾಹಗಳನ್ನುಂಟು ಮಾಡುತ್ತದೆ. ಇನ್ನೊಂದೆಡೆ ಹವಾಮಾನ ವೈಪರೀತ್ಯಗಳನ್ನುಂಟು ಮಾಡಿ ಚಂಡಮಾರುತ, ಸೈಕ್ಲೋನ್ , ಪ್ರವಾಹಗಳಿಗೆ ಕಾರಣವಾಗುತ್ತದೆ. ಉದಾ: 2005 ರ ಜುಲೈ 26 ರಂದು ಸುರಿದ 944 ಮಿ.ಮೀ ಮಳೆ ಮುಂಬಾಯಿ ನಗರಿಯನ್ನು ತತ್ತರಿಸುವಂತೆ ಮಾಡಿತು. ವಿಜ್ಞಾನಿಗಳ ಅಧ್ಯಯನದ ಪ್ರಕಾರ ಹೆಚ್ಚು ಆವೀಕರಣ ಹೆಚ್ಚಿನ ಮಳೆಗೆ ಕಾರಣವಾಗುತ್ತದೆ. ಹಾಗೆಂದು ವಿಶ್ವದಾದ್ಯಂತ ಸಂಪದ್ಭರಿತ ಬೆಳೆ ನೀಡಬಲ್ಲ ಮಳೆಯಾಗುತ್ತದೆ ಎಂದೇನೂ ಅಲ್ಲ ಮಳೆ ಬೀಳುತ್ತಿರುವ ಪ್ರದೇಶಗಳಲ್ಲಿ ಬದಲಾವಣೆ ಕಂಡುಬರುತಿದೆ. ಇದೇ ರೀತಿಯ ಭೂಮಿಯ ತಾಪಮಾನದ ಏರಿಕೆ ಮುಂದುವರಿದಲ್ಲಿ ಕ್ರಿ.ಶ.2035 ರ ಹೊತ್ತಿಗೆ ಹಿಮಾಲಯ ಪರ್ವತದ ಹಿಮರಾಶಿ ಸಂಪೂರ್ಣಾವಾಗಿ ಮಾಯವಾಗಲಿದೆ. 2100 ರ ಹೊತ್ತಿಗೆ ಸಮುದ್ರ ಮಟ್ಟದಲ್ಲಿ 40 ಸೆಂ.ಮೀ ಗಳ್ಷ್ಟು ಏರಿಕೆ ಕಂಡುಬರುತ್ತದೆ. ಇದರಿಂದ ಉಂಟಾಗುವ ಪ್ರವಾಹದಿಂದ ತೀರ ಪ್ರದೇಶಗಳಲ್ಲಿ ವಾಸಿಸುವ ಭಾರತದ 50 ಮಿಲಿಯನ್ ಜನ ನಿರಾಶ್ರಿತರಾಗುತ್ತಾರೆ. ಈಗಿನಷ್ಟೆ ತಾಪಮಾನದ ಏರಿದ ಇದ್ದರೂ ಸಹ ಟಿಬೇಟಿಯನ್ ಪ್ರಸ್ಥಭೂಮಿಯ ಹಿಮದ ಹಾಸು 5 ಲಕ್ಷ ಚ.ಕಿ.ಮೀ. ಪ್ರದೇಶಕ್ಕೆ ಇಳಿಯುತ್ತದೆ. ಕರಗಿದ ಆ ಬೃಹತ್ ಹಿಮರಾಶಿ ತಗ್ಗು ಪ್ರದೇಶಗಳಿಗೆ ನುಗ್ಗಿ ಅನಾಹುತವನ್ನು ಉಂಟುಮಾಡಲಿದೆ.

ಹವಾಮಾನದ ಬದಲಾವಣೆಯಿಂದಾಗಿ ಮಳೆಯ ಪ್ರಮಾಣ ಹಾಗೂ ಮಳೆ ಬೀಳುವ ಪ್ರದೇಶಗಳಲ್ಲಿ ಉಂಟಾಗುವ ಬದಲಾವಣೆ ಇಂದಿನ ಫಲವತ್ತಾದ ಭೂಮಿಯನ್ನು ಬಂಜರಾಗಿಸಬಹುದು . ಇದರೊಂದಿಗೆ ಹೆಚ್ಚಿದ ತಾಪಮಾನ ಭೂಮಿಯಿಂದ ನೀರಾವರಿಯನ್ನು ಕಡಿಮೆ ಮಾಡಿ ,ಫಲವತ್ತಾದ ಭೂಮಿಯನ್ನು ಶುಷ್ಕವಾಗಿಸುತ್ತದೆ. ಇದರಿಂದಾಗಿ ಕೃಷಿಗೆ ಲಭ್ಯವಿರುವ ಭೂಮಿಯ ಕೊರತೆಯಾಗಬಹುದು .2050 ರ ಹೊತ್ತಿಗೆ ಭಾರತದ ಪ್ರತಿ ವ್ಯಕ್ತಿಯ ನೀರಿನ ಅವಶ್ಯಕತೆಯ ಪೂರೈಕೆಯಲ್ಲಿ 38% ರಷ್ಟು ಕೊರತೆ ತಲೆದೋರುತ್ತದೆ. ಬಯಲು ಭೂಮಿಯಲ್ಲಿ ನೀರಿನ ಕೊರತೆ ಕುಗ್ಗಿದ ಹುಲ್ಲುಗಾವಲುಗಳು ,ದನಕರುಗಳಿಗೆ ಮೇವಿನ ಕೊರತೆಯನ್ನುಂಟು ಮಾಡುತ್ತದೆ. ಭಾರತದಲ್ಲಿ ಅರ್ಧ ಡಿಗ್ರಿಯಷ್ಟು ತಾಪಮಾನದ ಏರಿದೆ ಸಹ ಗೋದಿಯ ಇಳುವರಿಯಲ್ಲಿ ಶೇ.17 ರಷ್ಟು ಕಡಿತವನ್ನುಂಟು ಮಾಡಲಿದೆ. ಭಾರತದ ಒಟ್ಟಾರೆ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಶೇ.30 ರಷ್ಟು ಕಡಿಮೆಯಾಗಲಿದೆ. ಉತ್ತರ ಭಾರತದ ಗೋಧಿ ಬೆಳೆಯುವ ಪ್ರದೇಶಗಳು ತೀವ್ರತರನಾದ ನಷ್ಟವನ್ನು ಅನುಭವಿಸಲಿವೆ.

ಜಾಗತಿಕ ತಾಪಮಾನ ಏರಿಕೆಯ ಈ ಎಲ್ಲ ಪರಿಣಾಮಗಳು ಕೊನೆಗೆ ತಟ್ಟುವುದು ನಿಸರ್ಗಕ್ಕೆ ಹತ್ತಿರವಾಗಿ ಇರುವವರನ್ನೇ ಅದರಲ್ಲಿ ಎಷ್ಟೋ ಜನ ಒಮ್ಮೆಯೂ ಕಾರು ಹತ್ತಿರವಾಗಿ ಇರಬಹುದು. ವಿಮಾನ ಹಾರಾಟವನ್ನು ಅನುಭವಿಸದೇ ಇರುವವರೇ ಆಗಿರಬಹುದು . ಆದರೆ ಯಾರೋ ನಡೆಸಿದ ಅಧಿಕ ಕಾರ್ಬನ್ ಬಳಕೆಯ ಐಷಾರಾಮಿ ಜೀವನಕ್ಕೆ ಅವ-ರಿಲ್ಲ ಬಲಿಯಾಗುತ್ತಿದ್ದಾರೆ. ಜೀವಿಗಳ ಪಾಡಂತೂ ಇನ್ನೂ ಕಠಿಣ.ಹಾಗಾದರೆ ಪರಿಸ್ಥಿತಿಯ ಬದಲಾವಣೆ ಸಾಧ್ಯವೇ ಎನ್ನುವ ಪ್ರಶ್ನೆ ಉದ್ಭವಿಸಬಹುದು ಕಾಲ ಇನ್ನೂ ಮಿಂಚಿಲ್ಲ ಈ ಭೂಮಿ ಇನ್ನೂ ಹೆಚ್ಚು ಹೆಚ್ಚಾಗಿ ಬಿಸಿಯಾಗುವುದನ್ನು ತಡೆಯಬಹುದು. ಅದು ನಮ್ಮ ಜೀವನ ಶೈಲಿಯಲ್ಲಿ ನಾವು ಮಾಡಿಕೊಳ್ಳಬಹುದಾದ ಬದಲಾವಣೆಯಿಂದ ಮಿತಬಳಕೆ ಮರುಬಳಕೆ ತತ್ವದಿಂದ ಹವಾಮಾನವನ್ನು ಸೇರುತ್ತಿರುವ ಇಂಗಾಲದ ಪ್ರಮಾಣವನ್ನು ತಗ್ಗಿಸಬಹುದು. ಎಲ್ಲರೂ ಮೃದು ಧೋರಣೆಯನ್ನು ತಾಳಲಾರದೇ, ಪ್ರತಿಯೊಬ್ಬರೂ ಇದು ನಮ್ಮ ಕರ್ತವ್ಯ ಎಂದು ತಿಳಿದು ಮಾಡಲೇಬೇಕಾದ ಸಮಯ ಬಂದಿದೆ. ನಿಜವಾಗಿಯೂ ಭೂ ಗ್ರಹವನ್ನು ಉಳಿಸುವ ನಮ್ಮ ಅವಶ್ಯಕತೆ ಇದೆ. ಅದಕ್ಕಾಗಿ ನಾವೆಲ್ಲರು ಒಂದಾಗಬೇಕಾಗಿದೆ.

**-ಶಿವಶಂಕರ್**

## ಶ್ರೀ ರಾಮಕೃಷ್ಣ ವಿವೇಕಾನಂದ ಸಾಹಿತ್ಯ ಭಂಡಾರ

ಏಳಿ ಏದ್ದೇಳಿ ಗುರಿ ಮುಟ್ಟುವ ತನಕ ನಿಲ್ಲದಿರಿ ಎಂಬ ಮಹತ್ತರವಾದ ಹೇಳಿಕೆಗಳನ್ನು ನೀಡಿದಂತಹ ಸ್ಪೂರ್ತಿದಾಯಕವಾದ ವ್ಯಕ್ತಿ ಸ್ವಾಮಿ ವಿವೇಕಾನಂದರ ಕುರಿತ ಜೀವನ ಚ–ರಿತ್ರೆ ಹಾಗೂ ಅವರ ಉಪನ್ಯಾಸದ ವಿಶೇಷ ವ–ರಿದಿಯ ಪುಸ್ತಕಗಳನ್ನು ಕೊಳ್ಳುವವರಿಗೆ ಒಂದು ಉತ್ತಮ ಅವಕಾಶ.

ಶ್ರೀ ರಾಮಕೃಷ್ಣ ಆಶ್ರಮ ವತಿಯಿಂದ ನಗರದ ದೊಡ್ಡಕೆರೆ ಮೈದಾನದ ವಸ್ತುಪ್ರದರ್ಶನ ಆವರಣದಲ್ಲಿರುವ ಸ್ವಾಮಿ ವಿವೇಕಾನಂದ ಮಂಟಪದಲ್ಲಿ 'ಶ್ರೀರಾಮಕೃಷ್ಣ ವಿವೇಕಾನಂದ ಸಾಹಿತ್ಯ ಭಂಡಾರ ಮಳಿಗೆಯಲ್ಲಿ ಪುಸ್ತಕಗಳನ್ನು ಕೊಳ್ಳಬಹುದಾಗಿದೆ.

ಮಳಿಗೆಯಲ್ಲಿ ಸ್ವಾಮಿ ವಿವೇಕಾನಂದ, ಶ್ರೀರಾಮಕೃಷ್ಣ, ಶಾರದಾದೇವಿ, ಶ್ರೀರಾಮಕೃಷ್ಣ ಅವರ ಶಿಷ್ಯರ ಹಾಗೂ ಸೋದರಿ ನಿವೇದಿತಾ ಅವರ ಜೀವನ ಚರಿತ್ರೆಯ ಪುಸ್ತಕಗಳು ಮತ್ತು ಮಕ್ಕಳಿಗಾಗಿ ಸಚಿತ್ರ ಪುಸ್ತಕಗಳು, ಧ್ಯಾನ, ಯೋಗ, ವ್ಯಕ್ತಿತ್ವ ನಿರ್ಮಾಣ, ಸಂತರು, ಶ್ರೇಷ್ಠ ವ್ಯಕ್ತಿಗಳ ಜೀವನ ಚರಿತ್ರೆ ಮತ್ತು ಸಿಡಿ, ಡಿವಿಡಿ ಗಳು ಶೇಕಡ 33 ರಷ್ಟು ರಿಯಾಯಿತಿ ಯಲ್ಲಿ ಕೊಳ್ಳಬಹುದಾಗಿದ್ದು ವಸ್ತುಪ್ರದರ್ಶನದಲ್ಲಿ ವಿಶೇಷ ಪುಸ್ತಕ ಮಳಿಗೆಯಾಗಿದೆ.

ವಿಶೇಷ ಗ್ರಂಥಗಳು: ಕುವೆಂಪು ಅವರ ಸ್ವಾಮಿ ವಿವೇಕಾನಂದ, ಸ್ವಾಮೀ ಜಗದಾತ್ಮನಂದ ಅವರ ಬದುಕಲು ಕಲಿಯಿರಿ, ಪುರುಷೋತ್ತಮ ಅವರ ರಾಮಕೃಷ್ಣ ಪರಮಹಂಸರ ದೃಷ್ಟಾಂತ ಕಥೆಗಳು, ಧ್ಯಾನ, ವ್ಯಕ್ತಿತ್ವ ವಿಕಾಸನಕ್ಕೆ ಸಂಭಂದಿಸಿದಂತೆ ದಿನಕೊಂದು ಅಮೃತ ಬಿಂದು, ಪರಿವರ್ತನಶೀಲ ಸಮಾಜಕ್ಕೆ ಶಾಶ್ವತ ಮೌಲ್ಯಗಳು ಹೀಗೆ ವಿಶಿಷ್ಟವಾದ ವಿದ್ಯಾರ್ಥಿಗಳು, ಶಿಕ್ಷಕರು, ವೃದ್ಧರು ಮತ್ತು ಮಕ್ಕಳಿಗೆ ಸಂಬಂಧಿಸಿದ ಮಕ್ಕಳ ರಾಮಾಯಣ ನೀತಿ ಕಥೆಗಳು 1 ರೂ. ಇಂದ ಸಾವಿರ ಮೊತ್ತದ ಪುಸ್ತಕಗಳು ದೊರಕುತ್ತವೆ.

ಮಳಿಗೆಯ ವಿಶೇಷ: ಸ್ವಾಮಿ ವಿವೇಕಾನಂದರ ಒಟ್ಟಾರೆ ಬದುಕಿನ ಚಿತ್ರಣವನ್ನು ತಿಳಿಸುವಂತಹ ಅವರ ಭಾವಚಿತ್ರಗಳನ್ನು ಒಳಗೊಂಡ ಚಾರ್ಟ್ ಅನ್ನು ಮಳಿಗೆಯಲ್ಲಿ ನಿರ್ಮಿಸಿರುವುದು ನೋಡುಗರನ್ನು ತನ್ನತ್ತ ಸೆಳೆಯುತ್ತದೆ.

## ವಿದ್ಯಾರ್ಥಿಗಳು ಪುಸ್ತಕ ಓದುವುದನ್ನು ಮೈಗೂಡಿಸಿಕೊಳ್ಳಲಿ

ವಿದ್ಯಾರ್ಥಿಗಳು ಪ್ರಾಥಮಿಕ ಶಾಲಾ ಹಂತದಿಂದಲೇ ಪುಸ್ತಕವನ್ನು ಓದುವ ಅಭ್ಯಾಸವನ್ನು ರೂಢಿಸಿಕೊಳ್ಳಬೇಕೆಂದು ಮಹಾರಾಜ ಕಾಲೇಜಿನ ಪ್ರಾಂಶುಪಾಲ ಪ್ರೊ.ಕೆ.ಕಾಳಚನ್ನೇಗೌಡ ತಿಳಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕ ಗ್ರಂಥಾ ಲಯ ವಿಭಾಗದ ವತಿಯಿಂದ ಮಹಾರಾಜ ಕಾಲೇಜಿನ ಗ್ರಂಥಾಲಯದ ಆವರಣದಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹದ ಪ್ರಯುಕ್ತ ಪುಸ್ತಕ ಪ್ರದರ್ಶನ ಹಾಗೂ ನಿವೃತ್ತರಿಗೆ ಆತ್ಮೀಯ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಪುಸ್ತಕ ಓದುವ ಅಭ್ಯಾಸವನ್ನು ರೂಢಿಸಿಕೊಳ್ಳುವಂತೆ ಮಾಡಬೇಕಾದರೆ ಕಾಲೇಜಿನ ವತಿಯಿಂದ ಗ್ರಂಥಾಲಯ ಕಾರ್ಡ್ ತೆಗೆದುಕೊಳ್ಳು ವುದನ್ನು ಕಡ್ಡಾಯ ಮಾಡಬೇಕು. ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂದು ಸಾವಿರಾರು ಪುಸ್ತಕಗಳನ್ನು ಗ್ರಂಥಾಲಯದಲ್ಲಿ ಒದಗಿಸಲಾಗುತ್ತಿದೆ. ಗ್ರಂಥಾಲಯದ ಉಪಯೋಗವನ್ನು ಪ್ರತಿಯೊಬ್ಬ ವಿದ್ಯಾರ್ಥಿಯೂ ಪಡೆದುಕೊಳ್ಳುವಂತೆ ಮಾಡಬೇಕು ಎಂದು ಹೇಳಿದರು.

ನಿವೃತ್ತರಾದ ಪ್ರೊ.ಕೆ.ಕಾಳಚನ್ನೇಗೌಡ ಹಾಗೂ ಪರಿಚಾರಕ ಬೀರಯ್ಯ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಪ್ರೊ.ಕೆ.ಕಾಳಚನ್ನೇಗೌಡ ಅವರು ಶಾಲು ಹೊದೆಸಿ, ಸ್ಮರಣಿಕೆ ನೀಡಿ ಗೌರವಿಸಿದರು. ವಿವಿ ಸಂಜೆ ಕಾಲೇಜಿನ ಪ್ರಾಧ್ಯಾಪಕಿ ಡಾ.ಎಸ್.ಚಂದ್ರಮ್ಮ, ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಸಿ.ಡಿ. ಪರಶುರಾಮ, ಸ್ನಾತಕ ಗ್ರಂಥಾ ಲಯ ಉಪ ಗ್ರಂಥಪಾಲಕ ಆರ್.ಕೆ. ಸೋಮಶೇಖರ್ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ತಪ್ಪು – ಸರಿ – ಶಿಕ್ಷೆಎಂಬ ಆವಾಂತರ

ಆಕಸ್ಮಿಕವಾಗಿ ಪರಿಚಯ ವಾಗುವವರೇ ಬದುಕಲ್ಲಿ ಜಾಸ್ತಿ. ಆ ಪರಿಚಯಗಳು ಕೆಲವು ಭಾರಿ ಜೀವನದ ಅಂತ್ಯದವರೆಗೂ ಉಳಿಯುವಂತಹ ಸಂಬಂಧ ಗಳಾಗಿಯೂ ಉಳಿಯುತ್ತವೆ ಎಂಬ ಅನುಭವದ ಮಾತುಗಳನ್ನು ಕೇಳಿದ್ದೇನೆ.

ಆ ರೀತಿಯ ಸಂಬಂಧಗಳು ಯಾವುದು ನನಗೆ ಇನ್ನೂ ಯಾವುದೂ ದೊರಕದಿದ್ದರೂ. ಸದಾ ನೆನಪಾಗಿ ಉಳಿದಿರುವ ಘಟನೆ ಆಕಸ್ಮಿಕ ಪರಿಚಿತನ ಬಗ್ಗೆ ಹೇಳುತ್ತೇನೆ. ಜೀವನದಲ್ಲಿ ಎಲ್ಲರೂ ಕೆಲವು ಭಾರಿ ಆಕಸ್ಮಿಕವಾಗಿ ತಪ್ಪು ಮಾಡುತ್ತೇವೆ. ನಂತರ ಸಮಯ ಕಳೆದ ಹಾಗೇ ಎಚ್ಚರಿಕೆ ಮರೆತುಬಿಡುತ್ತೇವೆ. ಹೀಗೆ ಅಕಸ್ಮಿವಾಗಿ ಮಾಡುವ ತಪ್ಪಿಗೆ ತನ್ನ ಪ್ರಾಣವನ್ನೇ ಕಳೆದು ಕೊಂಡ ಘಟನೆಯನ್ನು ನಿಮ್ಮಗೆ ತಿಳಿಯಬಯದುತ್ತೇನೆ.

ಯಾವುದೇ ವ್ಯಕ್ತಿಯಾದರೂ ಹುಡುಕಿ ಹೋಗಿ ಪರಿಚಯ ಮಾಡಿಕೊಳ್ಳಲ್ಲ, ಹಾಗೂ ಮಾಡಿಕೊಳ್ಳುವುದಾದರೇ ಅವರಿ ೦ದ ಏನನ್ನೋ ಬಯುಸುವುದೇ ಆಗಿರುತ್ತೆ ಹೊರತು ನಿಷ್ಕಲ್ಮಷವಾದ ಸ್ನೇಹವಲ್ಲ ಎಂವುದು ನನ್ನ ತಪ್ಪು ಕಲ್ಪನೆ ಇರಬಹುದು.

ಮೈಸೂರಿಗೆ ವಿದ್ಯಾಭ್ಯಾಸಕ್ಕೆ ಎಂದು ಬಂದ ನನಗೆ ಕಾಲೇಜಿನಲ್ಲಿ, ವಿದ್ಯಾರ್ಥಿನಿಲಯದಲ್ಲಿ ಆಕಸ್ಮಿಕ ಪರಿಚಯವಾದವರೂ ಅನೇಕರು. ಹಾಗೇ ಪರಿಚಯವಾದವರೂ ಮಹೇಶ್ ಎಂಬಾತ ನಮ್ಮ ಪರಿಚಯಕ್ಕೆ ಮುಗ್ಧ ನಗುವು ಹೊರತು ಮತ್ತೇ ಯಾವುದೇ ತೆರಿಗೆಯನ್ನು ಕಟ್ಟಿರಲಿಲ್ಲ. ಕಾಲೇಜಿನಲ್ಲಿ ಈ ರೀತಿಯ ನಗುವಿನ ಮೂಲಕ ಕ್ಷೇಮ, ಕುಶಲ ವಿಚಾ–ರಿಸುವ, ಹೆಸರೇ ಗೊತ್ತಿಲ್ಲದ. ಮೊಗ ನೋಡಿದಾಗ ನೆನಪಾಗುವು ಅನೇಕ ಸ್ನೇಹಿತರಿದ್ದರು.



ಸ್ವಲ್ಪ ದಿನಗಳು ಉರುಳಿದ ನಂತರ ಪರಿಚಯ ಉತ್ತಮ ಸ್ನೇಹವಾಯಿತು. ಆತ ವಯಸ್ಸಿನಲ್ಲಿ ನನಗಿಂತ ದೊಡ್ಡವನಾಗಿದ್ದ. ಮನೆಯ ಕಡೆ ಬಡತನವಾದ್ದರಿಂದ ಖಾಸಗೀ ಶಾಲೆಯೊಂದಕ್ಕೆ ದೈಹಿಕ ಶಿಕ್ಷಕನಾಗಿ ಕೆಲಸಕ್ಕೆ ಹೋಗುತ್ತಿದ್ದ. ಉತ್ತಮ ಶಿಕ್ಷಕ ಎಂದು ವಿದ್ಯಾರ್ಥಿಗಳ ಮತ್ತು ಶಾಲೆಯ ಸಹೋದ್ಯೋಗಿ ಗಳಿಂದಲೂ ಗುರುತಿಸಿಕೊಂಡಿದ್ದ,

ಬಿಡುವಿನ ವೇಳೆಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ನಡೆಸುವುದರ ಜತೆಗೆ ತನ್ನ ಕಿರಿಯ ಅಂದರೆ ನನ್ನಂತಹ ವಿದ್ಯಾರ್ಥಿನಿಲಯದ ಅನೇಕ ಹುಡುಗರಿಗೆ ಮಾರ್ಗದರ್ಶಕ ನಾಗಿಯೂ ಮಾಹಿತಿ ನೀಡುತ್ತಿದ್ದ. 27 ವರ್ಷದ ಯುವಕನಾದರೂ ತಲೆಯು ಉತ್ತುಹೋಗಿ ಮೊಟ್ಟೆಯಾಗಿತ್ತು. ಹಾಗಿದ್ದರೂ ಬಡತನದ ನೋವಿನ ಮುಂದೆ ಆ ಯಾವು ಸಮಸ್ಯೆಯು ಇವನಿಗೆ ದೊಡ್ಡದಾಗಿರಲಿಲ್ಲ.

ಬೆಳಿಗ್ಗೆ ವಿದ್ಯಾರ್ಥಿನಿಲಯದಲ್ಲಿ ಎಲ್ಲರಿಗೂ ಆತನೆ ತಿಂಡಿ ಬಡಿಸುತ್ತಿದ್ದ. ಬಿಡುವಿದ್ದರೆ, ಮಧ್ಯಾನ್ಹ, ರಾತ್ರಿಯು ಯಾವುದೇ ಫಲಫೇಕ್ಷೆ ಇಲ್ಲದೇ. ಹಿಂಜರಿಯದೇ ಎಲ್ಲರಿಗೂ ಊಟ ಬಡಿಸುವ ಮೂಲಕ ಪರಿಚಿತನಾಗಿದ್ದ.

ಎಲ್ಲ ಹುಡುಗರು ಏನೂ ಪಿಟಿ ಮಾಸ್ಟ್ರೇ (ದೈಹಿಕ ಶಿಕ್ಷಕರೆ) ಚೆನ್ನಾಗಿದ್ದೀರಾ ಎಂದು ರೇಗಿಸಿದರು ಎಂದು ಕೋಪ ಮಾಡಿಕೊಂಡವನಲ್ಲ. ಹೀಗೆ ಎಲ್ಲರಿಂದ ಸ್ನೇಹ, ವಿಶ್ವಾಸವನ್ನು ಗಳಿಸಿದವನು ಆ ದಿನ ಶಾಲೆಯಲ್ಲಿ ವಾರ್ಷಿಕೋತ್ಸವ ಸಮಾರಂಭದಲ್ಲಿ ಭಾಗವಹಿಸಲು ತುಂಬಾ ಸಂತ್ತೋಷದಿಂದ ಸಿದ್ದನಾಗಿದ್ದ.

ಬೈಕ್ ತೊಳೆದು ಸಿದ್ದಗೊಳಿಸಿದ್ದ, ಹೊಸ ಬಟ್ಟೆಗಳನ್ನು ಧರಿಸಿ. ಕೊಠಡಿಯಿಂದ ತೆರಳುವ ಮುನ್ನ ವಿವಿಧ ಬಂಗಿಯಲ್ಲಿ ಛಾಯಚಿತ್ರಗಳನ್ನು ತೆಗೆದುಕೊಂಡು ನಗುತ ಆತುರವಾಗಿ ಬೈಕ್‌ನಲ್ಲಿ ಹೊರಟ.

ಹೊರಡುವ ಆತುರದಲ್ಲಿ ಕೊಠಡಿಯಲ್ಲಿಯೇ ಶಿರಸ್ತ್ರಾಣವನ್ನು ಮರೆತು ಹೋಗಿದ್ದ, ಹೀಗೆ ಸಂತೋಷದಿಂದ ಹೋದವನು ಮರಳಿ ಬಂದಿದ್ದು, ಹೆಣವಾಗಿ!

ಮೃತ ದೇಹವನ್ನು ನೊಡಲು ಹೋಗಿದ್ದ ನನ್ನನ್ನೂ ಸೇರಿದಂತೆ ಎಲ್ಲರಿಗೂ ಶವವನ್ನು ಕಣ್ಣಾರೆ ಕಾಣುವ ವರೆಗೂ ಆತನು ಸತ್ತಿಲ್ಲ ಎಂಬ ನಂಬಿಕೆಯಿತ್ತು. ಶವಗಾರದಲ್ಲಿ ಆತನ ತಲೆ ಹೋಳಗಿ ಮಲಗಿದ್ದ ದೇಹವನ್ನು ಕಂಡಾಗ ನಮ್ಮ ನಂಬಿಕೆ ಸುಳ್ಳಾಗಿತ್ತು.

ಹೊರಗೆ ನಿಂತಿದ್ದ ಪೊಲೀಸರನ್ನು ವಿಚಾರಿಸಿದಾಗ ರಾತ್ರಿ ಕಾರ್ಯಕ್ರಮ ಮುಗಿಸಿ ಬರುವ ವೇಳೆಗೆ ಭಾರಿ ಮಳೆ ಶುರುವಾಗಿತ್ತು, ಆ ಮಳೆಯಲ್ಲಿ ಬೈಕ್ ಏರಿ ಬಂದ ಮಹೇಶ್ ರಸ್ತೆಯ ಪಕ್ಕದ ಪಾದಚಾರಿ ಚಿಕ್ಕ ಗೋಡೆಗೆ ಗುದ್ದಿದ್ದಾನೆ. ಆ ಬಿರುಸಿಗೆ ಬೈಕ್ ಸೇ–ರಿದಂತೆ ಆತನು ಪಕ್ಕದ ಚರಂಡಿಗೆ ಬಿದ್ದಿದ್ದಾನೆ, ತಲೆಗೆ ಶಿರಸ್ತ್ರಾಣವನ್ನು ಧರಿಸದ ಕಾರಣ ತಲೆಗೆ ಬೃಹತ್ ಪ್ರಮಾಣದಲ್ಲಿ ಹೊಡೆತ ಬಿದ್ದು ರಕ್ತಸ್ರಾವವಾಗಿ ಮೃತನಾಗಿದ್ದಾನೆ ಎಂಬ ಹೇಳಿಕೆಯು ನಮ್ಮನ್ನು ದಂಗು ಬಡಿಸಿತ್ತು.

ಎಲ್ಲರ ಮೊಗದಲ್ಲೂ ಬೇಸರದ ಛಾಯೆ, ಕಣ್ಣಂಚಲಿ ನೀರು ತುಂಬಿತ್ತು ಮೃತ ಮಹೇಶ್‌ನ ತಾಯಿ ಶವಗಾರದ ಬಳಿ ಧಾವಿಸುತ್ತಿದ್ದಂತೆ. ಮಗನ ನೆನದು ದುಃಖಿಸಿ ಕುಸಿದು ಬಿದ್ದರು, ಮೌನವಾಗಿ

ನಿಂತಿದ್ದ ಎಲ್ಲರ ಕಣ್ಣಂಚಿನಲ್ಲಿ ತುಂಬಿದ್ದ ಕಣ್ಣೀರ ಕಟ್ಟೆ ಒಡೆದಿತ್ತು. ಕಣ್ಣೀರ ತಡೆಯುವ ಪ್ರಯತ್ನ ಮಾಡಿದರು. ಸಫಲವಾಗಲಿಲ್ಲ. ಆ ತಾಯಿಯ ಆಕ್ರಂದನವನ್ನು ಸಮಾಧಾನಪಡಿಸುವ ಶಕ್ತಿ ಯಾರಲ್ಲಿಯೂ ಇರಲಿಲ್ಲ. ದೇವರು ತುಂಬ ಚಿಕ್ಕವನಾಗಿ ಕಂಡ.

ಸರ್ಕಾರ ಅನೇಕ ಕಾಯ್ದೆಗಳನ್ನು ಹೊರಡಿಸಿ ಜನರ ಸುರಕ್ಷೆಗಾಗಿ ಯೋಜನೆಗಳನ್ನು ತರುತ್ತದೆ. ನಮ್ಮ ಜನರ ನಿರ್ಲಕ್ಷ್ಯದಿಂದ ಅನೇಕ ಭಾರಿ ಈ ರೀತಿಯ ಅಪಘಾತಗಳೂ ಉಂಟಾಗುತ್ತವೆ.

ಈ ರೀತಿಯ ಸಾವಿಗೆ, ಆ ತಾಯಿಯ ನೋವಿಗೆ ಬೆಲೆ ಕಟ್ಟಲಾಗುವುದೇ ತಪ್ಪು ಮಹೇಶ್ ನದೊ, ದೇವರದೋ ತಿಳಿಯದು ಆದರೆ ಶಿಕ್ಷೆ ಆ ಇಡೀ ಕುಟುಂಬಕ್ಕೆ, ಹೆತ್ತ ತಾಯಿಗೆ.

–ತ್ರಿವೇಣಿ

# ನಂಬಿಕೆಯ ಬೀಜ ಬಿತ್ತಿದ ಗುರು, ನನ್ನಪ್ಪ



ನಮ್ಮ ಬದುಕಿನುದ್ದಕ್ಕೂ ಕಳೆಯುವ ಪ್ರತಿ ಕ್ಷಣವೂ ಕಲಿಕೆಯಾಗಿದೆ. ಹಾಗೆಯೇ ನಾವು ಸಾಗುವ ಪ್ರತಿ ದಾರಿಗೂ ಒಬ್ಬ ಮಾರ್ಗದರ್ಶಕರಿರುತ್ತಾರೆ. ಅಂತೆಯೇ ನನ್ನ ಹೆಜ್ಜೆಯ ಹಾದಿಗೆ ಮಾರ್ಗ ಸೂಚಕನಾಗಿ, ನನ್ನ ಜೀವನದ ಮಹತ್ವದ ನಿರ್ಣಯಗಳ ರೂವಾರಿಯಾಗಿ, ಸರಿ ತಪ್ಪುಗಳ ತಿದ್ದುವ ಗುರುವಾಗಿ, ಮುನ್ನಡೆಸಿ ನನ್ನ ಯಶಸ್ಸಿಗಾಗಿ ತುಡಿಯುತ್ತಿರುವುದು ನನ್ನ ಜೀವದ ಗೆಳೆಯ. ನಾ ಹುಟ್ಟಿದಾಗಿನಿಂದ ಕೈಗೊಳ್ಳುವ ಒಂದೊಂದು ನಿರ್ಧಾರಕ್ಕೆ ಹುರಿದುಂಬಿಸಿ ಬದುಕಿನ ಪಾಠ ಕಲಿಸಿದ ಆ ನನ್ನ ಗುರು ನನ್ನ ಜನ್ಮದಾತ, ನನ್ನಪ್ಪ ಜೊತೆಗೆ ನನ್ನ ಆತ್ಮೀಯ ಗೆಳೆಯ, ನಾ ಕಣ್ಣು ಮುಚ್ಚಿದರೆ ತಾನು ಕನಸು ಕಾಣುವ. ನನಗೆ ತಂದೆ ಎನ್ನವುದಕ್ಕಿಂತ ಹೆಚ್ಚು ನನ್ನೆಲ್ಲ ಭಾವನೆಗಳಿಗೆ ಸ್ಪಂದಿಸುವ ಸ್ನೇಹಿತ. ಸಾಧನೆಗೆ ಸಿದ್ದವಾಗುವ ನನ್ನ ಪಯಣಕ್ಕೆ ನನ್ನಪ್ಪ ನಕ್ಷೆ ರೂಪಿಸಿ ಪ್ರೋತ್ಸಾಹ ನೀಡಿದರು.

ಗುಮ್ಮಟನಗರಿ ವಿಜಯಪುರದವಳು ನಾನು. ಸಾಂಸ್ಕ್ರತಿಕ ನಗರಿ ಮೈಸೂರಿನಲ್ಲೇ ಉನ್ನತ ವ್ಯಾಸಂಗ ಮಾಡಬೇಕೆಂದು ಹಠ ಹಿಡಿದಾಗ ಸಾಕಷ್ಟು ಅಡೆ ತಡೆಗಳು ಎದುರಾದವು. ಸಾಮಾನ್ಯವಾಗಿ ಹುಡುಗಿಯೊಬ್ಬಳನ್ನ ಪಕ್ಕದೂರಿಗೆಯೇ ಕಳುಹಿಸಲು ಹಿಂಜರಿಯುವ ಕಾಲದಲ್ಲಿ. ನೂರಾರು ಮೈಲಿಯ ದೂರದೂ–ರಿಗೆ ಕಳುಹಿಸಿ ನನ್ನಪ್ಪ ಎಲ್ಲರಂತಲ್ಲ ಎನಿಸಿದರು. ನನ್ನ ಇಚ್ಚೆಯಂತೆ ಮಾನಸಗಂಗೋತ್ರಿ ಮೈಸೂರಿಗೆ ಕಳುಹಿಸುವಾಗ ನಿನ್ನೆಲ್ಲಾ ಉತ್ತಮ ನಿರ್ಣಯಗಳಿಗೆ ನಾ ಬೆಂಬಲವಾಗಿರುವೆನೆಂದು ಭರವಸೆ ನೀಡಿ ನನ್ನಾಸೆಗೆ ನೀರೆದರು. ಜೊತೆಗೆ ನಾ ನಡೆಯುವ ಹಾದಿಯಲಿ ಲೋಪಗಳು ಕಂಡುಬಂದಾಗ ಕೆವೊಮ್ಮ ಗದುರಿಸಿ ನನ್ನ ಸಂಭಾಳಿಸಿದ್ದು ಇದೆ. ನಾನು ಅಂಬೆಗಾಲನಿಡುವುದಕ್ಕೂ ಮುಂಚೆಯೇ ನನಗೆ ಗುರುವಾಗಿದ್ದವರು ಅಪ್ಪ.

ಆತ್ಮೀಯ ಸ್ನೇಹಿತನಾಗಿ ನನ್ನ ವೈಯಕ್ತಿಕ ವಿಷಯಗಳ ವಿನಿಮಯಕ್ಕೆ ಆಸ್ಪದ ನೀಡುವುದರ ಜೊತೆಗೆ ನಾ ಸಾಗುವ ಮಾರ್ಗದಲಿ ಹಿಂಜ–ರಿದಾಗ ಆತ್ಮ ಸ್ಥೈರ್ಯ ತುಂಬಿ ನನ್ನೆದೆಗೆ ನಂಬಿಕೆಯ ಬೀಜ ಬಿತ್ತುವ ಗುರು ನನ್ನಪ್ಪ. ಒಂದು ನಿರ್ದಿಷ್ಟ ರಂಗದಲ್ಲಿ ನನ್ನ ಉನ್ನತಿಗಾಗಿ ತುಡಿಯುತ್ತಿರುವ ಜೀವ ನನ್ನ ಮೂಲ ಗುರು ನನ್ನ ತಂದೆ. ಸದಾ ಕಾಲ ಭರವಸೆಯ ಹಾದಿಯಲ್ಲಿ ಮುನ್ನುಗ್ಗುವಂತೆ ಪ್ರೇರೆಪಿಸುವ ಹಾಗೂ ನನ್ನ ವ್ಯಕ್ತಿತ್ವಕ್ಕೆ ಹೊಂದಿಕೆಯಾಗುವ ಕ್ಷೇತ್ರವನ್ನ ಆಯ್ಕೆ ಮಾಡಿಕೊಳ್ಳುವಲ್ಲಿ ನಿಗಾ ವಹಿಸಿ ಸರಿ ದಾರಿಗೆ ದೂಡುವ ಹಾಗೂ ಬದುಕಿಗೊಂದು ನೆಲೆಯಾಗುವವರೆಗೂ ನನಗಾಗಿ ಶ್ರಮಿಸುವುದಾಗಿ ಪಣ ತೊಟ್ಟಿರುವ ನನ್ನಪ್ಪ ಪಾಠ ಮಾಡದೇ ಗುರುವಾದ ಗುರು ನನಗೆ.

–ವಿಜಯಲಕ್ಷ್ಮೀ ಮೆಟಗಾರ

# ಹೆಣ್ಣು ಅಮ್ಮ, ಅಕ್ಕ, ಮಡದಿಯಾಗಿ ಬೇಕು. ಮಗಳಾಗಿ.....?



ಪ್ರಾಚೀನ ಕಾಲದಿಂದಲೂ ಸ್ತ್ರೀ-ಪುರುಷರ ಕುರಿತಾಗಿ ಮೇಲು ಕೀಳಿನ ಭಾವನೆಯನ್ನ ಕಂಡು ಕೇಳುತ್ತಾ ಬಂದಿದ್ದೇವೆ. ಅದು ನಮ್ಮ ಪೂರ್ವಜರಲ್ಲಿಂದೂ ಕಾಣಸಿಗುವಂಹದ್ದು. ಇನ್ನು ಮದ್ಯಯುಗೀಯ ಕಾಲದಲ್ಲಂತೂ ತೀರಾ ಕೆಳಮಟ್ಟದಲ್ಲಿ ಇರಿಸಿಕೊಳ್ಳುತ್ತಿದ್ದರು. ಇಂದಿನ ಆಧುನಿಕ ಪ್ರಪಂಚದಲ್ಲಿ ಸಾಕಷ್ಟು ಬದಲಾವಣೆ ಕಂಡರು ಕೂಡ ಮನೆಯಲ್ಲಿ ಹೆಣ್ಣು ಮಗಳ ಜನನವಾದರೆ ಸೂತಕದ ಛಾಯೆ ಮೂಡಿದಂತೆ! ಅದೇ ಗಂಡುಮಗುವಿನ ಜನನವಾದರೆ ಹಾಲು-ತುಪ್ಪ ಪಾಯಸವಂತೆ. ಅದೇನೋ ಗೊತ್ತಿಲ್ಲ ದೈವ ಸೃಷ್ಟಿಯಲ್ಲಿ ಸ್ತ್ರೀ-ಪುರುಷರಲ್ಲಿ ದೈಹಿಕ ವ್ಯತ್ಯಾಸವನ್ನು ಹೊರತು ಪಡಿಸಿದರೆ ಬೇರಾವ ವ್ಯತ್ಯಾಸವು ಇಲ್ಲ ಹೀಗಿರುವಾಗ ಸ್ತ್ರೀಯರನ್ನು ಕೀಳು, ಪುರುಷರನ್ನು ಮೇಲು ಎಂದು ನಿರ್ಧರಿಸುವುದಾದರೂ ಏಕೆ?

ಮಾತೊಂದು ಇದೆ ಎಲ್ಲಿ ಸ್ತ್ರೀಯರನ್ನು ಪೂಜಿಸುತ್ತಾರೋ ಅಲ್ಲಿ ದೇವತೆಗಳು ನೆಲೆಸಿರುತ್ತಾರೆ ಎಂಬುದು . ಇದೆಲ್ಲ ಬರಿ ಬಾಯಿ ಮಾತಿನಲ್ಲ ಹೇಳುವ ಈ ಪುರುಷ ಸಮಾಜಕ್ಕೆ ಹೆಣ್ಣು ಮಡದಿಯಾಗಿ, ತಾಯಾಗಿ, ಸಹೋದ-ರಿಯಾಗಿ, ಕೊನೆಯ ಪಕ್ಷ ಒಬ್ಬ ವೇಶ್ಯೆಯಾಗಿಯೂ ಬೇಕು, ಆದರೇ ಮಗಳಾಗಿ ಯಾಕೆ ಬೇಡ? ಎಂಬುದು ವಿಪರ್ಯಾಸವೇ ಸರಿ. ಅದರಲ್ಲೂ ಇಂದಿನ ಆಧುನಿಕ ಯುಗದಲ್ಲಿ ಸ್ತ್ರೀಯರು ಸಬಲರು ಹಾಗೂ ಪುರುಷರಿಗೆ ಸರಿಸಮಾನರು ಎಂಬುದಕ್ಕೆ ಉದಾಹರಣೆಯಾಗಿ ಒಂದು ತೀರಾ ಕೆಳದರ್ಜೆಯ ಹುದ್ದೆಯಿಂದ ಹಿಡಿದು ಒಂದು ದೇಶದ ರಾಷ್ಟ್ರಪತಿಯಾಗುವ ವರೆಗು ಸಾಧನೆಗೈದು ತೊಟ್ಟಿಲನ್ನು ತೂಗುವ ಕೈ ಜಗತ್ತನ್ನು ತೂಗುಬಲ್ಲದು ಎಂಬುದನ್ನು ಸಾಬೀತು ಪಡಿಸಿಯಾಗಿದೆ. ಆದರೂ ಕೂಡ ಸ್ತ್ರೀಯರಿಗೆ ಸಮಾನ ಅವಕಾಶ ಕಲ್ಪಿಸದೇ ಇರುವುದು ವಿಚಿತ್ರವೇ ಸರಿ. ಇಂದು ಪ್ರತಿಯೊಂದು ಕ್ಷೇತ್ರದಲ್ಲಿ ಸ್ತ್ರೀಯರು ತಮ್ಮದೆಯಾದ ಛಾಪು ಮೂಡಿಸಿದ್ದು. ಹಾಗೂ ಸ್ವತಂತ್ರ್ಯವಾಗಿ ಬದುಕುತ್ತಿರುವುದು ಪುರುಷ ಸಮಾಜಕ್ಕೆ ಸಹಿಸಲು ಆಗುತ್ತಿಲ್ವೇನೋ? ಅದೇನೋ ಗೊತ್ತಿಲ್ಲ ಸಂಸ್ಕೃತಿ ಸಂಪ್ರದಾಯದ ಹೆಸರಿನಲ್ಲಿ ಸ್ತ್ರೀಯರ ಸ್ವತಂತ್ರವನ್ನು ಕಟ್ಟಿ ಹಾಕುವ ಈ ಸಮಾಜ ಪುರುಷ ವರ್ಗವನ್ನು ಮನಬಂತೆ ವರ್ತಿಸಿದರೂ ಪ್ರಶ್ನೇ ಮಾಡದಿರುವುದಾದರೂ ಏಕೆ?



ಈ ಸೃಷ್ಟಿಯ ಪ್ರತಿಯೊಂದು ಪವಿತ್ರ ಜೀವಿ ವಿಷಯ ವಸ್ತುಗಳಿಗೆ ಹೆಣ್ಣಿನ ಹೆಸರನಿಟ್ಟುವ ಈ ಸಮಾಜ ಪವಿತ್ರ ಹೆಣ್ಣಿನ ಜನನವನ್ನು ವಿರೋದಿಸುವುದಾದರೂ ಏಕೆ? ಒಂದೊಮ್ಮೆ ಯೋಚಿಸಿ ಸ್ತ್ರೀಯರು ಕೂಡಾ ಪುರುಷ ಜನನವನ್ನು ವಿರೋಧಿಸಿದರೆ ಏನಾಗಬಹುದು? ಈ ಎಲ್ಲಾ ಅಂಶವನ್ನು ಪುರುಷ ಸಮಾಜ ಯೋಚಿಸಿದರೆ ಇಂದು ಈ ಅಸಮಾನತೆಯ ಹುಳುಕು ಇರುತ್ತಿರಲಿಲ್ಲ ಎಂದೆನಿಸುತ್ತದೆ. ಅದೇನೆ ಆಗಲಿ ಓದಂತು ಸತ್ಯ ಸೃಷ್ಟಿಯಲ್ಲಿ ಹೆಣ್ಣು-ಗಂಡು ಪರಸ್ಪರ ಅವಲಂಬಿತವಾಗಿರುವುದು ಕಟು ಸತ್ಯವಾಗಿದ್ದು ಈ ಎರಡೂ ಲಿಂಗಗಳು ಒಂದೇ ನಾಣ್ಯದ ಎರಡು ಮುಖಗಳ ಹಾಗೂ ಒಂದೇ ಬಂಡಿಯ ಎರಡು ಚಕ್ರಗಳಿಸಸದ್ದಂತೆ ಆದ್ದರಿಂದ ಎಂದಿಗೂ ಎರಡೂ ಸಮಾನವೇ ಆಗಿರುತ್ತವೆ. ಒಂದರ ಕೊರತೆಯಾದರೂ ಇನ್ನೊಂದರ ಕಾರ್ಯ ಸ್ಥಗಿತಗೊಳ್ಳುವುದು ಹಾಗೂ ಕಳೆಗುಂದುವುದು.

**-ವಿಜಯಲಕ್ಷ್ಮೀ ಮೆಟಗಾರ**

# ಜನಸಂಖ್ಯಾ ಸ್ಫೋಟದಿಂದ ಪರಿಸರ ನಾಶ



ದೇಶದಲ್ಲಿ ಹೆಚ್ಚಳವಾಗುತ್ತಿರುವ ಜನಸಂಖ್ಯಾ ಸ್ಫೋಟದಿಂದ ಶೇ.40ರಷ್ಟು ಪರಿಸರ ನಾಶವಾಗುತ್ತಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ವಿಜ್ಞಾನಿ ಟಿ. ತಿಪ್ಪೇಸ್ವಾಮಿ ಬೇಸರ ವ್ಯಕ್ತಪಡಿಸಿದರು.

ನಗರದ ಮಹಾರಾಣಿ ಕಾಲೇಜಿ ನಲ್ಲಿ ಸೋಮವಾರ ಏರ್ಪಡಿಸಿದ್ದ ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಜಯ ಲಕ್ಷ್ಮಮ್ಮಣ್ಣಿ ರೇಂಜರ್ ಘಟಕಗಳ ದೈನಂದಿನ ಚಟುವಟಿಕೆಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜಾಗತಿಕ ತಾಪಮಾನ ಹೆಚ್ಚುತ್ತಿದ್ದು, ಭೂಮಿಯ ಮೇಲೆ ವಾಸ ಮಾಡುವುದೇ ಕಷ್ಟಕರವಾಗುತ್ತಿದೆ. ಮನುಷ್ಯನಿಗೆ ಜ್ವರ ಬಂದಾಗ ಒಂದೆರಡು ಡಿಗ್ರಿ ವ್ಯತ್ಯಾಸವಾದಲ್ಲಿ ಅವನ ಶರೀರ ಹೇಗೆ ಬಲಹೀನವಾಗುತ್ತದೆಯೋ ಹಾಗೆಯೇ ಭೂಮಿಯ ತಾಪಮಾನದಲ್ಲಿ ಸ್ವಲ್ಪ ವ್ಯತ್ಯಾಸ ವಾದರೂ ಬಿಸಿಲು, ತಾಪ ಹೆಚ್ಚಾ ಗುತ್ತದೆ ಎಂದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್‌ನ ಸಹಾಯಕ ಜಿಲ್ಲಾ ಸಂಘಟಕ ಕೆ.ಜಿ.ಗೋಪಾಲಕೃಷ್ಣ, ದೇಶ ಸೇವೆ ಮಾಡಲು ಯುವಕರು ಸನ್ನದ್ಧರಾಗಬೇಕು ಎಂಬ ತರಬೇತಿ ಯನ್ನು ಮಕ್ಕಳಿಗೆ ಇಲ್ಲಿ ನೀಡ ಲಾಗುತ್ತದೆ. ರೇಂಜರ್, ರೋವರ್‌ಗಳಿಗೆ 3 ತಿಂಗಳ ತರಬೇತಿ, 6 ತಿಂಗಳ ನಿಪುಣ್ ತರಬೇತಿ, 9 ತಿಂಗಳ ರಾಜ್ಯ ಪುರ ಸ್ಕಾರ್ ತರಬೇತಿ ಹಾಗೂ 1 ವರ್ಷದ ರಾಷ್ಟ್ರ ಪುರಸ್ಕಾರ ತರಬೇತಿಗಳನ್ನು ಹಂತ-ಹಂತವಾಗಿ ಮಕ್ಕಳಿಗೆ ನೀಡಲಾಗುವುದು ಎಂದರು.

ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್‌ನ ಘಟಕದ ಸಂಚಾಲಕಿ ಪ್ರೊ. ಎಂ.ದೇವಮ್ಮಣ್ಣಿ, ಮಹಾರಾಣಿ ಮಹಿಳಾ ಕಲಾ ಕಾಲೇಜಿನ ವಿಜ್ಞಾನ ಪ್ರಾಧ್ಯಾಪಕ ಸಂತೋಷ್ ಕುಮಾರ್, ಕಾಲೇಜಿನ ಪ್ರಾಂಶುಪಾಲ ಪ್ರೊ. ಬಿ.ಟಿ.ವಿಜಯ್ ಉಪಸ್ಥಿತರಿದ್ದರು..

ಮೈಸೂರಿನ ಮಹಾ ರಾಣಿ ಕಾಲೇಜಿನಲ್ಲಿ ಸೋಮ ವಾರ ಏರ್ಪಡಿಸಿದ್ದ ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಜಯಲಕ್ಷ್ಮಮ್ಮಣ್ಣಿ ರೇಂಜರ್ ಘಟಕಗಳ ದೈನಂದಿನ ಚುಟುವಟಿ-ಕೆಗಳನ್ನು ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್‌ನ ಸಹಾಯಕ ಜಿಲ್ಲಾ ಸಂಘಟಕ ಕೆ.ಜಿ.ಗೋಪಾಲಕೃಷ್ಣ ಉದ್ಘಾಟಿಸಿದರು. ಟಿ.ತಿಪ್ಪೇಸ್ವಾಮಿ, ಪ್ರೊ. ಎಂ. ದೇವಮ್ಮಣ್ಣಿ, ಸಂತೋಷ್ ಕುಮಾರ್, ಪ್ರೊ.ಬಿ.ಟಿ.ವಿಜಯ್ ಅವರನ್ನು ಚಿತ್ರದಲ್ಲಿ ಕಾಣಬಹುದು.

KAMMAVARI SANGHAM (R)-1952
K.S. GROUP OF INSTITUTIONS
Kanakapura Road, Bengaluru - 560 109



KS Institute of Technology
Web : www.ksit.ac.in
CET Code: E091 COMED K Code: E068

KS School of Engg. & Mgmt.
Web : www.kssem.edu.in
CET Code: E203 COMED K Code: E067

KS School of Architecture
Web : www.kssa.edu.in
CET Code: E250 COMED K Code: E179

KS Polytechnic
Web : www.kspolytechnic.edu.in

ADMISSIONS OPEN

BE CSE, ECE, MECH, CIVIL, EEE, TCE
B.Arch
M.Tech
MBA
3 Years Diploma CSE, CIVIL, ECE, MECH & AUTOMOBILE

KSGI Specialities: Hi-Tech Infrastructure, Dedicated, Experienced and well qualified Teaching Staff, State of the Art Laboratories, Conference Halls, Seminar Halls, Hi-Tech Library and Sports Amenities.

Sri. Y. Ramachandra Naidu, President, Mob : 94481 10297
Sri. K. Venkatesh Naidu, BE(Mech), Hon. Secretary, Mob : 98451 36097
Sri. D. Rukmangada, BE,MBA, Treasurer, Mob : 93436 25256